# ಸಮಾಜ ವಿಜ್ಞಾನ
# SOCIAL SCIENCE

## ಆರನೆಯ ತರಗತಿ
## Standard Six

## ತೃತೀಯ ಅವಧಿ
## TERM III


**Translators**

**S. GURUKARAPPA,**
P.G. Asst, Govt. Hr. Sec. School, Talavadi, Erode District - 638461.

**M. JADESWAMY,**
B.T. Asst, Govt. High School, Chikkahalli, Erode District - 638461.

**D. KALAPPA**
B.T. Asst, Govt. Hr. Sec. School, Panakalli, Erode District - 638461.

**B. SARALA KUMARI**
B.T. Asst, Govt. Hr. Sec. School, Aynavaram, Chennai - 23.

# ಪಾಠ. 1. ಸ್ಥಳೀಯ ಸರ್ಕಾರ

ನಮ್ಮ ಭಾರತ ದೇಶ ಬಹು ದೊಡ್ಡ ಭೂವಿಸ್ತೀರ್ಣವನ್ನು ಹೊಂದಿದೆ. ಇಲ್ಲಿ ಜನಸಂಖ್ಯೆ ಅತ್ಯಧಿಕ. ಇಲ್ಲಿನ ಜನರು ಗ್ರಾಮಗಳಲ್ಲಿಯೂ, ನಗರಗಳಲ್ಲಿಯೂ, ಪಟ್ಟಣಗಳಲ್ಲಿಯೂ ವಾಸಿಸುತ್ತಿದ್ದಾರೆ. ಇಷ್ಟೊಂದು ಹರಡಿರುವ ಪ್ರದೇಶದಲ್ಲಿ ಜೀವಿಸುವ ಕೋಟಿಗಟ್ಟಲೆ ಜನರ ಅವಶ್ಯಕತೆಗಳು, ಸಮಸ್ಯೆಗಳು ಎಲ್ಲವನ್ನು ಕೇಂದ್ರದಲ್ಲಿಯೂ, ರಾಜ್ಯದಲ್ಲಿಯೂ ಇರುವ ಸರ್ಕಾರಗಳಿಂದ ಮಾತ್ರ ಪರಿಹರಿಸಲು ಸಾಧ್ಯವಾಗುವುದಿಲ್ಲ.

ದೇಶದ ಅತೀ ದೂರದಲ್ಲಿರುವ ಜನರ ಸೇವೆ ಸಲ್ಲಿಸುವುದಕ್ಕಾಗಿಯೇ ಸ್ಥಳೀಯ ಆಡಳಿತ ಸಂಸ್ಥೆಗಳು ಭಾರತದಲ್ಲಿ ರಚಿಸಲ್ಪಟ್ಟವು. ಆ ಸ್ಥಳೀಯ ಸಂಸ್ಥೆಗಳ ಬಗ್ಗೆ ನಾವು ಈ ಪಾಠದಲ್ಲಿ ಓದುವೆವು.

**ಚಟುವಟಿಕೆ :**

### ನಿನ್ನ ಗ್ರಾಮದ ಹೆಸರೇನು?

ಆ ಹೆಸರು ಹೇಗೆ ಬಂದಿತು? ಅದಕ್ಕೆ ಅರ್ಥ, ಕಾರಣವೇನೆಂಬುದು ನಿನಗೆ ತಿಳಿದಿದೆಯೇ? ಅಜ್ಜಿ – ಅಜ್ಜ – ಗ್ರಾಮದ ಹಿರಿಯರನ್ನು ಕೇಳಿದರೆ ಹೇಳುವರು.

ಸೌಂದರ್ಯ ಮತ್ತು ಅರ್ಥಗಳನ್ನು ಒಳಗೊಂಡ ಹಳ್ಳಿಗಳ ಹೆಸರುಗಳು ತಮಿಳು ನಾಡಿನ ವಿಶೇಷತೆಗಳಲ್ಲಿ ಒಂದಾಗಿವೆ. ಕೆಲವು ಗ್ರಾಮಗಳ ಹೆಸರುಗಳು ಇತಿಹಾಸದ ಪುಟಗಳಲ್ಲಿ ಸ್ಥಾನವನ್ನು ಪಡೆದುಕೊಂಡಿವೆ.

'ಗಂಗೈಕೊಂಡ ಚೋಳಪುರ'
'ಮಲ್ಯೆಯಡಿ ಕುರುಚಿ'
'ಚೇರನ್ ಮಾದೇವಿ'
'ಸಾನ್ರೋರ್ ಪಾಳ್ಯಂ'
'ಎಪ್ಪೋದುಂ ವೆನ್ರಾನ್'
'ನಲ್ಲಾಣ್ ಪಿಳ್ಳೈ ಪೆಟ್ರಾಳ್'
'ಪಾಲ್ ವಾರ್ತು ವೆನ್ರಾನ್'
'ತಿರುಚಿಟ್ರ ಪಲಮ್'
'ಮಲ್ಯೆಯಾಂಡಿ ಪಟ್ಟಣಂ'

'ಪಣ್‌ಪೊಳಿಲ್' – ಇವುಗಳು ತಮಿಳು ನಾಡಿನ ಕೆಲವು ಗ್ರಾಮಗಳ ಹೆಸರುಗಳಾಗಿವೆ. ಇವುಗಳ ಹೆಸರುಗಳಿಗೆ ಕಾರಣವೇನು? ಎಂದು ಶಿಕ್ಷಕರುಗಳಿಂದ ತಿಳಿದು, ಗುಂಪುಗಳಾಗಿ ಕುಳಿತು, ಗುಂಪಿಗೆ ಇಪ್ಪತ್ತು ಗ್ರಾಮಗಳ ಹೆಸರುಗಳ ಕಾರಣಗಳ ಬಗ್ಗೆ ವಿವರವನ್ನು ಸಂಗ್ರಹಿಸಿ ಬರೆಯಿರಿ.

" ಗ್ರಾಮಪಂಚಾಯಿತಿ ಕಛೇರಿ " ಎಂದು ಬರೆದಿರುವ ನಾಮಫಲಕದ ಕಟ್ಟಡ ಒಂದನ್ನು ನೀನು ನೋಡಿರುವೆ ಗ್ರಾಮಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷ, ವಾರ್ಡ್ ಸದಸ್ಯರುಗಳು ಇವರುಗಳ ಹೆಸರುಗಳು ಅಲ್ಲಿರುವ ನಾಮಫಲಕದಲ್ಲಿ ಬರೆಯಲ್ಪಟ್ಟಿರುತ್ತವೆ.

ಇದೇರೀತಿ, ಪಂಚಾಯಿತಿ ಯೂನಿಯನ್, ನಗರಸಭೆ, ಜಿಲ್ಲಾ ಪಂಚಾಯಿತಿ, ಮಹಾನಗರ ಪಾಲಿಕೆ ಸಂಸ್ಥೆಗಳೂ ಸಹ ಜನಪ್ರತಿನಿಧಿಗಳಿಂದ ಕಾರ್ಯನಿರ್ವಹಿಸುತ್ತಿವೆ.

ಈ ಸಂಸ್ಥೆಗೆ 'ಸ್ಥಳೀಯ ಆಡಳಿತ' ಎಂದು ಹೆಸರು. ಆಂಗ್ಲ ಆಡಳಿತಗಾರ. 'ರಿಪ್ಪನ್ ಪ್ರಭು' ಎಂಬುವವರು ಸ್ಥಳೀಯ ಆಡಳಿತ ಸಂಸ್ಥೆಯ ವಿಧಾನವನ್ನು ಭಾರತದಲ್ಲಿ ಪರಿಚಯಿಸಿದರು. ದೇಶ ಸ್ವಾತಂತ್ರ್ಯ ಪಡೆಯುವುದಕ್ಕೆ ಮೊದಲೇ ಸ್ಥಳೀಯ ಆಡಳಿತ ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿತ್ತು.

## ಗ್ರಾಮ ಪಂಚಾಯಿತಿ

ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಸರ್ಕಾರ ಗ್ರಾಮ ಪಂಚಾಯಿತಿ ಆಗಿದೆ. ಇದರ ಅಧ್ಯಕ್ಷ, ವಿಭಾಗ (ವಾರ್ಡ್) ಸದಸ್ಯರುಗಳು (ಪಂಚಾಯಿತಿ ಸದಸ್ಯರುಗಳು), ಯೂನಿಯನ್ ಕೌನ್ಸಿಲರ್, ಇವರುಗಳು ಜನರಿಂದ ನೇರವಾಗಿ ಚುನಾವಣೆಯ ಮೂಲಕ ಆಯ್ಕೆಯಾಗುವರು. ಆಯ್ಕೆಯಾದ ಸದಸ್ಯರುಗಳಲ್ಲಿ ಒಬ್ಬರನ್ನು ಮಾತ್ರ ಉಪಾಧ್ಯಕ್ಷರನ್ನಾಗಿ ಅವರುಗಳಲ್ಲಿಯೇ ಆಯ್ಕೆ ಮಾಡಿಕೊಳ್ಳುವರು. ಇವರುಗಳ ಅಧಿಕಾರಾವಧಿ 5 ವರ್ಷಗಳು.

### ಗ್ರಾಮ ಪಂಚಾಯಿತಿ ಮೂಲಕ ನೆರವೇರಿಸುವ ಕಾರ್ಯಗಳು

- ಬೀದಿ ದೀಪಗಳ ವ್ಯವಸ್ಥೆ.
- ಗ್ರಾಮಗಳ ರಸ್ತೆ ನಿರ್ಮಾಣ.
- ಕುಡಿಯುವ ನೀರನ್ನು ಒದಗಿಸುವುದು.
- ಚರಂಡಿ ವ್ಯವಸ್ಥೆ.
- ಸಣ್ಣ ಸೇತುವೆಗಳ ನಿರ್ಮಾಣ.
- ಮನೆ ಕಟ್ಟಲು ನಿವೇಶನಗಳಿಗೆ ಅನುಮತಿ ನೀಡುವುದು.
- ಗ್ರಾಮ ಗ್ರಂಥಾಲಯಗಳನ್ನು ನೋಡಿಕೊಳ್ಳುವುದು.
- ಸಮೂಹ ಮನೆಗಳ ನಿರ್ಮಾಣ.
- ಯುವಕರಿಗೂ ಮನರಂಜನಾ ಕೇಂದ್ರಗಳನ್ನು ಮತ್ತು ಆಟದ ಮೈದಾನಗಳನ್ನು ನಿರ್ಮಿಸುವುದು, ಪರಾಮರ್ಶಿಸುವುದು ಇನ್ನೂ ಮುಂತಾದವುಗಳಾಗಿವೆ.

ನಿನ್ನ ಗ್ರಾಮದಲ್ಲಿ ಬೀದಿ ದೀಪಗಳು ಉರಿಯುವುದಿಲ್ಲ; ರಸ್ತೆಯು ಹಾನಿಯಾಗಿರುವುದು, ಕೊಳವೆಯಲ್ಲಿ ನೀರು ಬರಲಿಲ್ಲ, ಚರಂಡಿಯು ಮುಚ್ಚಿ ಕೊಂಡಿರುವುದರಿಂದ ಬೀದಿಯಲ್ಲಿ ಅಶುದ್ಧ ನೀರು ಹರಿಯುವುದು. ಈ ಸಮಸ್ಯೆಗಳಿಗೆ ಪರಿಹರಿಸಿಕೊಳ್ಳಲು ಯಾರಲ್ಲಿ ಮೊರೆಹೋಗುವೆ?

ಮೇಲೆ ತಿಳಿಸಿದ ಕೆಲಸಗಳನ್ನು ಮಾಡಲು ಹಣ ಬೇಕು ಅಲ್ಲವೇ? ಆ ಹಣವನ್ನು ಯಾರು ಕೊಡುವರು? ಪ್ರಜೆಗಳಾಗಿರುವ ನಾವೇ! ನಮ್ಮಿಂದ ಮನೆ ಕಂದಾಯ, ಕುಡಿಯುವ ನೀರಿನ ತೆರಿಗೆ, ವೃತ್ತಿ ತೆರಿಗೆ, ಆಸ್ತಿ ತೆರಿಗೆ ಮುಂತಾದ ತೆರಿಗೆಗಳನ್ನು ವಸೂಲಿ ಮಾಡಲಾಗುತ್ತದೆ. ಆ ನಿಧಿಯಿಂದ ಮೇಲ್ಕಂಡ ಕಾರ್ಯಗಳಿಗೆ ಖರ್ಚು ಮಾಡಲಾಗುವುದು.

## ಕಂದಾಯ:

- ಮನೆಕಂದಾಯ, ವೃತ್ತಿ ತೆರಿಗೆ, ಅಂಗಡಿಗಳಿಗೆ ವಿಧಿಸುವ ತೆರಿಗೆ.
- ಕುಡಿಯುವ ನೀರಿನ ಕೊಳವೆ ಜೋಡಿಸುವ ಶುಲ್ಕ ಮತ್ತು ತೆರಿಗೆ.
- ಭೂಕಂದಾಯದ ಒಂದು ಭಾಗ,
- ಆಸ್ತಿಗಳ ಬದಲಾವಣೆಗಾಗಿ ಪಡೆಯುವ ಶುಲ್ಕದ ಒಂದು ಭಾಗ.

  – ಇವುಗಳು ಗ್ರಾಮಾಭಿವೃದ್ಧಿಗಾಗಿ ಖರ್ಚುಮಾಡಲ್ಪಡುತ್ತವೆ.

ಇವುಗಳಿಂದ ಬರುವ ಆದಾಯ ಮಾತ್ರ ಸಾಲದು. ಆದ್ದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನಾನಿಧಿಗಳನ್ನೂ, ಸಹಾಯಧನಗಳನ್ನೂ, ಅನುದಾನವನ್ನೂ,' ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿ ಮೂಲಕ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತವೆ.

## ಗ್ರಾಮ ಪಂಚಾಯಿತಿ ಸಭೆ:

ಪ್ರತಿಯೊಂದು ಗ್ರಾಮದಲ್ಲಿಯೂ ಗ್ರಾಮ ಪಂಚಾಯಿತಿ ಸಭೆ (ಗ್ರಾಮ ಸಭೆ) ಸ್ಥಾಪಿಸಲ್ಪಟ್ಟಿದೆ. ಗ್ರಾಮ ಪಂಚಾಯಿತಿಯ ಪ್ರದೇಶದ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಜನರು ಅದರ ಸದಸ್ಯರುಗಳು.

ಗ್ರಾಮದ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳು, ವಾರ್ಷಿಕ ಆಯ – ವ್ಯಯ ಯೋಜನೆಗಳು, ಯೋಜನೆಗಳ ಫಲಾನುಭವಿಗಳು ಯಾರು? ಎಂಬುದು ಮುಂತಾದವುಗಳೆಲ್ಲವೂ ಗ್ರಾಮ ಪಂಚಾಯಿತಿ ಸಭೆಯಲ್ಲಿ ಒಪ್ಪಿಗೆ ಪಡೆದ ನಂತರ ಕಾರ್ಯರೂಪಕ್ಕೆ ಬರುತ್ತವೆ.



## ಚಟುವಟಿಕೆ:

ನಿಮ್ಮ ಗ್ರಾಮಪಂಚಾಯಿತಿಯಲ್ಲಿ ' ಗ್ರಾಮಸಭೆ' ನಡೆಯುವುದನ್ನು ನೋಡಿರುವಿರಾ? ಪೋಷಕರೊಡನೆ ಹೋಗಿ ನೋಡಿರಿ. ಗ್ರಾಮ ಸಭೆ ನಡೆಯುವ ರೀತಿಯನ್ನು ನೋಡುವುದು, ವಿವರಗಳನ್ನು ಕೇಳಿ ತಿಳಿದುಕೊಳ್ಳಿರಿ.

ಗ್ರಾಮ ಪಂಚಾಯಿತಿ ಸಭೆಗಳು ವರ್ಷಕ್ಕೆ ನಾಲ್ಕು ಬಾರಿ ನಡೆಯುತ್ತವೆ.

ಜನವರಿ 26 ಗಣರಾಜ್ಯೋತ್ಸವ ದಿನ

ಮೇ 1 ಕಾರ್ಮಿಕರ ದಿನ

ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ ದಿನ

ಅಕ್ಟೋಬರ್ 2 ಮಹಾತ್ಮಾ ಗಾಂಧೀಜಿ ಜನ್ಮದಿನ.

ಇವು ನಾಲ್ಕೂ ದಿನಗಳು ಸರ್ಕಾರಿ ರಜಾ ದಿನಗಳಾಗಿವೆ. ಎಲ್ಲರೂ ಭಾಗವಹಿಸುವ ಸಲುವಾಗಿ ಈ ದಿನಗಳಲ್ಲಿ ಪಂಚಾಯಿತಿ ಯೂನಿಯನ್ ಸಭೆಗಳು ನಡೆಯುವವು. ಸರ್ಕಾರಿ ರಜಾ ದಿನಗಳಾದ ಇವುಗಳನ್ನು ಬಿಟ್ಟು ಕೆಲವು ದಿನಗಳಲ್ಲಿ ಪಂಚಾಯಿತಿ ಯೂನಿಯನ್ ಸಭೆಗಳನ್ನು ನಡೆಸಬಹುದು. ಅಲ್ಲದೆ ತುರ್ತಾಗಿ ಯಾವುದಾದರೂ ಯೋಜನೆಗಳಿಗೆ ಒಪ್ಪಿಗೆ ಪಡೆಯಬೇಕಾದಾಗ ವಿಶೇಷ ಗ್ರಾಮ ಪಂಚಾಯಿತಿ ಸಭೆಗಳನ್ನು ನಡೆಸಲಾಗುವುದು.

ನಿಮ್ಮ ಊರಿನಲ್ಲಿರುವ ಗ್ರಾಮಪಂಚಾಯಿತಿಯಲ್ಲಿ ಕೆಲಸ ನಿರ್ವಹಿಸುತ್ತಿರುವವರಿಂದ ತೆರಿಗೆ ವಿಧಿಸುವ ರೀತಿಯನ್ನು ತಿಳಿದುಕೊಳ್ಳಿರಿ.

### ಪಂಚಾಯಿತಿ ಯೂನಿಯನ್

ಹಲವು ಗ್ರಾಮಪಂಚಾಯಿತಿಗಳು ಒಟ್ಟಿಗೆ ಸೇರಿ 'ಪಂಚಾಯಿತಿ ಒಕ್ಕೂಟ' (ಪಂಚಾಯಿತಿ ಯೂನಿಯನ್) ವಾಗಿದೆ.

ಚುನಾವಣೆ ಮೂಲಕ ಐದುಸಾವಿರ ಜನಸಂಖ್ಯೆಗೆ ಒಬ್ಬ ಸದಸ್ಯನಂತೆ ಪಂಚಾಯಿತಿ ಯೂನಿಯನ್ ಸದಸ್ಯರುಗಳು ಆರಿಸಲ್ಪಡುವರು. ಇವರುಗಳಲ್ಲಿ ಒಬ್ಬರು ಪಂಚಾಯಿತಿ ಯೂನಿಯನ್ ಕೌನ್ಸಿಲ್ ಅಧ್ಯಕ್ಷರಾಗಿ ಸದಸ್ಯರುಗಳಿಂದ ಆರಿಸಲ್ಪಡುವರು.

### ಪಂಚಾಯಿತಿ ಯೂನಿಯನ್‌ಗಳ ಕಾರ್ಯಗಳು :

- ಪಂಚಾಯಿತಿ ಯೂನಿಯನ್ ರಸ್ತೆಗಳ ನಿರ್ವಹಣೆ.
- ಕುಡಿಯುವ ನೀರನ್ನು ಒದಗಿಸುವುದು.
- ಗ್ರಾಮ ಆಸ್ಪತ್ರೆಗಳನ್ನು ನಿರ್ಮಿಸುವುದು.
- ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿ ಕಾರ್ಯ.
- ಹೆರಿಗೆ ಆಸ್ಪತ್ರೆಗಳನ್ನು ನಿರ್ಮಿಸುವುದು.
- ಮಾರುಕಟ್ಟೆಗಳನ್ನು ಸ್ಥಾಪಿಸುವುದು.
- ಪಶುವೈದ್ಯ ಶಾಲೆಗಳನ್ನು ಸ್ಥಾಪಿಸುವುದು.
- ಕೃಷಿ ಉಪಕರಣಗಳು, ಗೊಬ್ಬರಗಳನ್ನು ಒದಗಿಸುವುದು.
- ಸಾಮಾಜಿಕ ಅರಣ್ಯಗಳನ್ನು ಬೆಳೆಸುವುದು ಹಾಗೂ ವಿಸ್ತರಿಸುವುದು.

### ಚಟುವಟಿಕೆ:

ಶಿಕ್ಷಕರ ಸಹಾಯದಿಂದ ಪಂಚಾಯಿತಿ ಯೂನಿಯನ್ ಅಧ್ಯಕ್ಷ / ಅಧ್ಯಕ್ಷೆ ಯನ್ನು ಸಂದರ್ಶಿಸಿ ಅವರ ಕಾರ್ಯಗಳು, ಭವಿಷ್ಯದ ಯೋಜನೆಗಳನ್ನು ಬರೆದುಕೊಂಡು ಬಂದು ತರಗತಿಯಲ್ಲಿ ಶಿಕ್ಷಕರೊಡನೆ ಚರ್ಚಿಸಿ.

ಪಂಚಾಯಿತಿ ಯೂನಿಯನ್‌ನ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡಲು ಹಾಗೂ ಪರಿಶೀಲಿಸಲು ಜಿಲ್ಲಾ ಆಡಳಿತದ ಅಧೀನದಲ್ಲಿ ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತವಿದೆ. ಜಿಲ್ಲಾಧಿಕಾರಿಗಳು, ಯೋಜನಾಧಿಕಾರಿಗಳು, ಆಯಾಯ ತಾಲ್ಲೋಕು ಅಭಿವೃದ್ಧಿ ಅಧಿಕಾರಿ ಯವರು ಈ ಸಂಸ್ಥೆಯ ಮೂಲಕ ಕಾರ್ಯಗಳನ್ನು ಶೀಘ್ರವಾಗಿ ಕಾರ್ಯಗೊಳಿಸುವವು.

## ಜಿಲ್ಲಾ ಪಂಚಾಯಿತಿ:

ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಪಂಚಾಯಿತಿ ಅಸ್ತಿತ್ವದಲ್ಲಿದೆ. 50,000 ಜನಸಂಖ್ಯೆಗೆ ಒಬ್ಬರು ಎಂಬ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಸಮಿತಿ ಸದಸ್ಯರು, ಜನರಿಂದ ಆರಿಸಲ್ಪಡುತ್ತಾರೆ. ಅವರಲ್ಲಿ ಒಬ್ಬರನ್ನು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಸದಸ್ಯರುಗಳು ಆಯ್ಕೆಮಾಡುವರು, ಇವರುಗಳ ಅಧಿಕಾರಾವಧಿ ಐದು ವರ್ಷಗಳು.

### ಜಿಲ್ಲಾಪಂಚಾಯಿತಿ ಕರ್ತವ್ಯಗಳು :

ಜಿಲ್ಲೆಯಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳು, ಪಂಚಾಯಿತಿ ಯೂನಿಯನ್‌ಗಳ ಅಭಿವೃದ್ಧಿ ಯೋಜನೆಗಳು, ಜಿಲ್ಲಾ ರಸ್ತೆಗಳ ನಿರ್ಮಾಣ ಕುರಿತು ಸರ್ಕಾರಕ್ಕೆ ಸಲಹೆ ನೀಡುವುದು, ಅಭಿವೃದ್ಧಿ ಯೋಜನೆಗಳನ್ನು ಪರೀಶೀಲಿಸುವುದು ಇನ್ನೂ ಮುಂತಾದವುಗಳು ಜಿಲ್ಲಾ ಪಂಚಾಯಿತಿಯ ಕರ್ತವ್ಯಗಳಾಗಿವೆ.

## ಚಟುವಟಿಕೆ :

ನಿನ್ನ ಜಿಲ್ಲೆಯಲ್ಲಿರುವ ಸ್ಥಳೀಯ ಸರ್ಕಾರಗಳ ಬಗ್ಗೆ ತಿಳಿದುಕೊಳ್ಳಿ.

## ಜಿಲ್ಲಾ ಯೋಜನಾ ಸಮಿತಿ:

ಜಿಲ್ಲಾ ಪಂಚಾಯಿತಿ ಸಮಿತಿ ಅಧ್ಯಕ್ಷರೇ ಇದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವರು. ಇದರ ಸದಸ್ಯರನ್ನು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಚುನಾವಣೆಯ ಮೂಲಕ ಆಯ್ಕೆ ಮಾಡಲ್ಪಡುವರು. ಆಯಾಯ ಜಿಲ್ಲಾ, ವಿಧಾನ ಸಭೆ, ಲೋಕಸಭೆ ಸದಸ್ಯರುಗಳು ಈ ಸಮಿತಿಯ ಸದಸ್ಯರುಗಳು. ಜಿಲ್ಲಾ ಸಂಪೂರ್ಣ ಅಭಿವೃದ್ಧಿ ಯೋಜನೆ ತಯಾರಿಸಿ, ರಾಜ್ಯ ಯೋಜನಾ ಸಮಿತಿಗೆ ಕಳುಹಿಸಿಕೊಡುವುದು ಜಿಲ್ಲಾ ಯೋಜನಾ ಸಮಿತಿಯ ಕರ್ತವ್ಯವಾಗಿದೆ.

## ಪುರಸಭೆ

ಹತ್ತು ಸಾವಿರ ಜನಸಂಖ್ಯೆಗಿಂತ ಹೆಚ್ಚಾಗಿರುವ ಪಂಚಾಯಿತಿಗಳನ್ನು ತಾಲ್ಲೋಕು ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲಾಗುತ್ತವೆ. ಇದರ ಅಧ್ಯಕ್ಷರು ಸದಸ್ಯರುಗಳು ಜನರಿಂದ ಪ್ರತ್ಯಕ್ಷವಾಗಿ ಚುನಾವಣೆಯ ಮೂಲಕ ಆರಿಸಲ್ಪಡುವರು. ತಾಲ್ಲೋಕು ಪಂಚಾಯಿತಿಯ ಆಡಳಿತವನ್ನು ಕಾರ್ಯ ನಿರ್ವಹಣಾಧಿಕಾರಿಯವರು ನೋಡಿಕೊಳ್ಳುವರು.

## ನಗರಸಭೆ

ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆಯನ್ನುಳ್ಳ ಪ್ರದೇಶಗಳು ಮತ್ತು ನಗರಸಭೆಗಳಾಗಿ ಕಾರ್ಯನಿರ್ವಹಿಸುತ್ತವೆ. ಇದರ ಅಧ್ಯಕ್ಷರುಗಳು, ಸದಸ್ಯರುಗಳು ಜನರಿಂದ ಪ್ರತ್ಯಕ್ಷವಾಗಿ ಆರಿಸಲ್ಪಡುವರು, ಇವರ ಅಧಿಕಾರದ ಅವಧಿ ಐದು ವರ್ಷಗಳು. ಪುರಸಭೆ ಆಯುಕ್ತರು ಇದರ ಆಡಳಿತಾಧಿಕಾರಿಯಾಗಿರುವರು.

## ಮಹಾನಗರ ಪಾಲಿಕೆ



ಚೆನ್ನೈ ಮಹಾನಗರಪಾಲಿಕೆಯ ಕಟ್ಟಡ

ಹಲವು ಲಕ್ಷ ಜನಸಂಖ್ಯೆಯನ್ನೂ, ಹಲವು ಮೂಲಭೂತ ಸೌಕರ್ಯಗಳನ್ನೂ, ಹಲವು ಕಛೇರಿಗಳನ್ನು ಒಳಗೊಂಡಿರುವ ಪ್ರದೇಶಗಳನ್ನು ಮಹಾನಗರ ಪಾಲಿಕೆ ಎನ್ನುತ್ತೇವೆ. ಮಹಾನಗರಪಾಲಿಕೆಯ ಅಧ್ಯಕ್ಷರು 'ಮೇಯರ್' ಆಗಿರುತ್ತಾರೆ. ಮಹಾನಗರ ಸಭೆಯ ನಿರ್ವಹಣ ಅಧಿಕಾರಿಯನ್ನು ಆಯುಕ್ತರು ಎನ್ನುವರು. ಮಹಾನಗರಸಭೆ ಅಧ್ಯಕ್ಷರು, ಸದಸ್ಯರುಗಳ ಅಧಿಕಾರಾವಧಿ ಐದು ವರ್ಷಗಳಾಗಿವೆ.



# ಮೌಲ್ಯಮಾಪನ:

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

1. ಭಾರತದಲ್ಲಿ ಈಗ ಅಸ್ತಿತ್ವದಲ್ಲಿರುವ ಸ್ಥಳೀಯ ಸಂಸ್ಥೆಗಳನ್ನು ಮೊದ ಮೊದಲು ಪರಿಚಯಿಸಿದವರು ........................................

(ಅ) ರಿಪ್ಪನ್ ಪ್ರಭು (ಆ) ಗಾಂಧೀಜಿ (ಇ) ಇಂದಿರಾಗಾಂಧಿ

2. ಪಂಚಾಯಿತಿ ಯೂನಿಯನ್ ಅಧ್ಯಕ್ಷರು ............................ ರಿಂದ ಆರಿಸಲ್ಪಡುವರು.

(ಅ) ವಿಭಾಗ ಸದಸ್ಯರು (ವಾರ್ಡ್ ಸದಸ್ಯರು)
(ಆ) ಜನರು
(ಇ) ಯೂನಿಯನ್ ಅಧ್ಯಕ್ಷ.

**II. ಬಿಟ್ಟ ಸ್ಥಳ ತುಂಬಿರಿ.**

1. ಮಹಾನಗರಪಾಲಿಕೆಯ ಅಧ್ಯಕ್ಷರ ಆಡಳಿತದ ಅವಧಿ ........................... ವರ್ಷಗಳು.
2. ಪ್ರತಿಯೊಂದು ಜಿಲ್ಲೆಯೂ ಒಂದು ............................... ಪಂಚಾಯಿತಿಯನ್ನು ಒಳಗೊಂಡಿದೆ.


**III. ಉತ್ತರಿಸಿ:**

1

1. ಸ್ಥಳೀಯ ಸಂಸ್ಥೆಗಳು ಏಕೆ ಅವಶ್ಯಕ?
2. ಗ್ರಾಮ ಪಂಚಾಯಿತಿಯ ಕಾರ್ಯಗಳು ಯಾವುವು? ವರ್ಷದಲ್ಲಿ ಎಷ್ಟು ಬಾರಿ, ಯಾವ ಯಾವ ದಿನಗಳಲ್ಲಿ ಗ್ರಾಮಸಭೆ ಸೇರುವುದು?
3. ಗ್ರಾಮ ಪಂಚಾಯಿತಿಯ ಕಾರ್ಯಗಳಲ್ಲಿ ನಾಲ್ಕನ್ನು ತಿಳಿಸಿ.
4. ಗ್ರಾಮ ಪಂಚಾಯಿತಿಯ ಆದಾಯವು ಯಾವ ಯಾವ ಮೂಲಗಳಿಂದ ದೊರೆಯುತ್ತದೆ?
5. ಪಂಚಾಯಿತಿ ಯೂನಿಯನ್ ಹೇಗೆ ರಚನೆಯಾಗುತ್ತದೆ?

# ರಚನಾತ್ಮಕ ಮೌಲ್ಯಮಾಪನ

1. ನಿನ್ನ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಸಂದರ್ಶನ ಮಾಡಲು ಪ್ರಶ್ನೆ ಪಟ್ಟಿ ತಯಾರಿಸಬೇಕು.
2. ಚುನಾವಣೆಯು ನಡೆಯುವಾಗ ನಡೆಯುವ ಘಟನೆಗಳ ಬಗ್ಗೆ ನಾಟಕ ತಯಾರಿಸುವುದು.
3. ನಿನ್ನ ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಭೇಟಿ ಮಾಡಿದರೆ ಯಾವ ಯಾವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅರ್ಜಿಗಳನ್ನು ನೀಡುವೆ. ಮಾದರಿ ಅರ್ಜಿಯೊಂದನ್ನು ತಯಾರಿಸು.
4. ಶಾಲೆಯ ಆಡಳಿತವು ಉತ್ತಮವಾಗಿ ನಡೆಯಲು ಶಾಲೆಯಲ್ಲಿ ಯಾವ ಯಾವ ಸಮಿತಿಗಳನ್ನು ರಚಿಸಬಹುದು.
5. ನಿನ್ನ ಸ್ಥಳೀಯ ಸರ್ಕಾರದ ಬಗೆಗಿನ ಮನ ನಕ್ಷೆಯೊಂದನ್ನು ತಯಾರಿಸಬೇಕು.



# ಪಾಠ 2. ಪ್ರಜಾಪ್ರಭುತ್ವ, ಮಾನವಸಂಪತ್ತು ಮತ್ತು ಮಹಿಳೆಯರ ಬುದ್ಧಿ ಸಾಮರ್ಥ್ಯ

ಒಂದು ರಾಷ್ಟ್ರದ ಪ್ರಜೆಗಳಿಂದ ಚುನಾಯಿಸಲ್ಪಟ್ಟ, ಪ್ರತಿನಿಧಿಯಿಂದ ನಡೆಸುವ ಆಳ್ವಿಕೆಯನ್ನು ಪ್ರಜಾಪ್ರಭುತ್ವ ಎಂದು ಕರೆಯುತ್ತಾರೆ. ಪ್ರಜೆಗಳು ನಡೆಸುವ ಆಳ್ವಿಕೆಯೇ 'ಗಣರಾಜ್ಯ' 'ಜನನಾಯಕ' ಎಂದು ಕರೆಯುತ್ತಾರೆ.

ಗಣರಾಜ್ಯದಲ್ಲಿ ಪ್ರಜೆಗಳೆಲ್ಲರೂ ಸಮನಾದ ಹಕ್ಕನ್ನು ಹೊಂದಿರುವರು. 18 ವರ್ಷ ತುಂಬಿದ ವರೆಲ್ಲರೂ ಗಂಡು-ಹೆಣ್ಣು ಎಂಬ ಬೇಧ ಭಾವ ವಿಲ್ಲದೆ ಮತಚಲಾಯಿಸುವ ಹಕ್ಕಿದೆ.

ಪ್ರಜಾಪ್ರಭುತ್ವ ರಾಷ್ಟ್ರದ ಎಲ್ಲರೂ ಸಮಾನ ಅವಕಾಶದ ಹಕ್ಕನ್ನು ಉಳ್ಳವರಾಗಿರುವರು. ಜನಸಂಖ್ಯೆಯಲ್ಲಿ ಅರ್ಧ ಭಾಗವಿರುವ ಮಹಿಳೆಯರ ಅಭಿವೃದ್ಧಿಯನ್ನು ತಿರಸ್ಕರಿಸುವುದು ಪ್ರಜಾಪ್ರಭುತ್ವವನ್ನು ಬಲಹೀನಗೊಳಿಸಿದಂತೆ ಆಗುವುದು. ಮಹಿಳೆಯರು ಸಂಪೂರ್ಣವಾಗಿ ಭಾಗವಹಿಸಲು ಅವಕಾಶವನ್ನು ಕಲ್ಪಿಸುವುದು ಪ್ರಜಾಪ್ರಭುತ್ವವನ್ನು ಸುಭದ್ರಗೊಳಿಸಲು ಸಾಧ್ಯವಾಗುವಂತೆ ಮಾಡುತ್ತದೆ.

ಎಲ್ಲರಿಗೂ ಸಮನಾದ ಅವಕಾಶದೊರಕಲು ಶಿಫಾರಸ್ಸು ಮಾಡಬೇಕು. ಸಮಾಜದಲ್ಲಿ ಹಲವುಕಾರಣಗಳಿಂದ ಉಂಟಾಗಿರುವ ಏರಳಿತಗಳನ್ನು ದೂರಮಾಡಬೇಕು. ಜನರಲ್ಲಿಯೇ ಏರಳಿತಗಳು ಹಲವು ರೀತಿಯಲ್ಲಿ ಉಂಟಾಗಿವೆ. ಹೀಗೆ ಉಂಟಾದವುಗಳೇ ಹುಟ್ಟಿನಿಂದಲೇ ಮೇಲ್ಜಾತಿ, ಕೀಳು ಜಾತಿ ಎಂಬ ವ್ಯತ್ಯಾಸ, ಅಸ್ಪೃಶ್ಯತೆ, ಶ್ರೀಮಂತರು-ಬಡವರು; ಉದ್ಯಮಿ-ಕಾರ್ಮಿಕರು; ಆಳುವವರು - ಆಳಲ್ಪಡುವವರು; ವಿದ್ಯಾವಂತರು - ಅವಿದ್ಯಾವಂತರು; ಭೂಮಾಲಿಕರು - ಬೇಸಾಯಗಾರರು ಎಂಬ ವ್ಯತ್ಯಾಸ ಅಂದಿನ ಕಾಲದಲ್ಲೇ ಉಂಟಾದವು. ಪ್ರಜೆಗಳ ಸಮತ್ವವು ಪ್ರಜಾಪ್ರಭುತ್ವದ ಮೂಲಭೂತ ಅವಶ್ಯಕತೆಯಾಗಿದೆ.

ಸಮಾಜದಲ್ಲಿ ಏರ್ಪಡುವ ಏರಿಳಿತಗಳಿಂದಾಗಿ ವಾಸಿಸಲುಬೇಕಾದ ಉತ್ತಮ ಅವಕಾಶಗಳಿಂದ ಹಲವರು ಕಾಲಾನುಕಾಲದಿಂದಲೂ ವಂಚಿತರಾದರು. ಅವರುಗಳು ಕಳೆದುಕೊಂಡ ಆ ಅವಕಾಶಗಳನ್ನು ಅವರಿಗೆ ದೊರಕುವಂತೆ ಮಾಡುವುದರ ಮೂಲಕ ಅವರನ್ನು ಪರಿಪೂರ್ಣ ಜೀವನ ನಡೆಸುವಂತೆ ಮಾಡಬಹುದು. ಇಂತಹ ಕಾರ್ಯ ಸಮಾಜದಲ್ಲಿರುವ ಏರಿಳಿತಗಳನ್ನು ದೂರಮಾಡಿ ಒಂದು ಸಮತ್ವ ಸಮಾಜವನ್ನು ನಿರ್ಮಿಸಬಹುದು ಹೀಗೆ ಮಾಡಿದರೆ ಸಾಮಾಜಿಕ ನ್ಯಾಯ ನೀಡಿದಂತೆ ಆಗುತ್ತದೆ.

ಅಂತೆಯೇ ಪ್ರಕೃತಿದತ್ತವಾಗಿಯೇ ಗಂಡು ಹೆಣ್ಣು ಎಂಬ ಎರಡುವಿಧಗಳಾಗಿ ಜನರಲ್ಲಿ ಪುರಷರಿಗೆ ಉನ್ನತ ಸ್ಥಾನ ಮಹಿಳೆಯರಿಗೆ ಸ್ಥಾನವನ್ನು ಕಡಿಮೆ ಮಾಡುವ ಈ ಮೂಢನಂಬಿಕೆ ಜನರಲ್ಲಿ ಭಿನ್ನಾಭಿಪ್ರಾಯಗಳನ್ನು ಬೆಳೆಸುವುದು. ಈ ಭಿನ್ನಾಭಿಪ್ರಾಯವು ಸಮುದಾಯದಲ್ಲಿ ಮಾನವನ ಅಭಿವೃದ್ಧಿಗಾಗಿ ಕೈಗೊಂಡ ಅಭಿವೃದ್ಧಿಕಾರ್ಯಗಳಿಗೆ ಒಂದು ದೊಡ್ಡತಡೆಯಾಗಿದೆ.

ಸ್ವಾಭಾವಿಕವಾಗಿ ಮೃದು ಸ್ವಭಾವವನ್ನು ಹೊಂದಿರುವವರು ಮಹಿಳೆಯರು ಎಂಬ ಅಭಿಪ್ರಾಯವಿರುವುದರಿಂದಲೇ ಪುರಷರಿಗಿಂತ ಮಹಿಳೆಯರು ಕಡಿಮೆ ಬುದ್ಧಿಶಕ್ತಿಯನ್ನು ಹೊಂದಿದವರಾಗುವುದಿಲ್ಲ.

ಸಾಮಾನ್ಯವಾಗಿ ಪುರುಷರು ದೈಹಿಕ ಬಲವನ್ನು ಪಡೆದವರಾಗಿದ್ದರೆ ಮಹಿಳೆಯರು ಮಾನಸಿಕ ಬಲವನ್ನು ಹೊಂದಿದ್ದಾರೆ. ದೈಹಿಕ ಬಲ - ಮಾನಸಿಕ ಬಲ ಎಂಬುದು ವೈಯಕ್ತಿಕ ವ್ಯತ್ಯಾಸವಾಗಿದೆ.

ಇದು ಪುರುಷ, ಮಹಿಳೆ ಎಂಬ ವ್ಯತ್ಯಾಸದಿಂದ ಏರ್ಪಟ್ಟದ್ದಲ್ಲ. ಸಮಾಜದಲ್ಲಿ ಕಾಲಾನುಕಾಲದಿಂದ ನಡೆದುಬಂದ ಸಂಪ್ರದಾಯದಂತೆ ಪುರಷರಿಗೆ ಶಿಕ್ಷಣನೀಡುವ ಅವಕಾಶ, ದುಡಿದು ಸಂಪಾದಿಸುವ ಅವಕಾಶ, ಆಸ್ತಿಯನ್ನು ಅನುಭವಿಸುವ ಅವಕಾಶ,

ದೊರೆಯಿತು. ಇದರಿಂದಲೇ ದಿನಗಳೆದಂತೆ ಸಮಾಜದಲ್ಲಿ ಪುರುಷರಿಗೆ ಪ್ರಾಧಾನ್ಯತೆಯನ್ನು ನೀಡಿ ಆಡಳಿತ ನಡೆಸುವ, ಸರ್ಕಾರದ ಉನ್ನತ ಪದವಿಗಳನ್ನು ಪಡೆದು ಕಾರ್ಯನಿರ್ವಹಿಸುವ ಅಧಿಕಾರಕ್ಕೆ ಪುರುಷರೇ ಅರ್ಹರು ಎಂಬ ತಪ್ಪಾದ ಅಭಿಪ್ರಾಯವು ಬೆಳೆಯಿತು.

ಮಕ್ಕಳಿಗೆ ಜನ್ಮನೀಡಿ ಅವರ ಪಾಲನೆ ಪೋಷಣೆಗಳನ್ನು ಮಾಡುವ ತಾಯಂದಿರು ಮನೆಯಲ್ಲಿದ್ದುಕೊಂಡೇ ಕುಟುಂಬದ ಜವಾಬ್ದಾರಿಯನ್ನು ನೋಡಿಕೊಳ್ಳುವವರೆಂದೂ ಪುರಷರು ಮನೆಯ ಹೊರಗಿನ ಕೆಲಸ ಮತ್ತು ಕಠಿಣವಾದ ಇತರ ಕೆಲಸಗಳನ್ನು ಮಾಡಲು ಪುರಷರೇ ಯೋಗ್ಯರು ಎಂದು ಬಹಳಕಾಲದಿಂದಲೂ ನಮ್ಮಲ್ಲಿ ಅಭಿಪ್ರಾಯವಿತ್ತು.

ಅಲ್ಲದೆ ಪ್ರತಿಯೊಬ್ಬ ಮಹಿಳೆಯೂ ನಿರ್ಧಿಷ್ಟಕಾಲದ ತನಕ ತಂದೆ, ಪುರುಷ ಮತ್ತು ಮಗನ ಆಶ್ರಯದಲ್ಲಿ ಬಾಳಬೇಕೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಈ ಅಭಿಪ್ರಾಯ ತಲತಲಾಂತರದಿಂದ ಮುಂದುವರಿದ ಕಾರಣದಿಂದ ಅದು ಒಂದು ಸಮಾಜದ ಸಂಪ್ರದಾಯವಾಗಿ ಪರಿಗಣಿಸಲ್ಪಟ್ಟಿತು. ಈ ಅಭಿಪ್ರಾಯಗಳೇ ವಿದ್ಯಾರ್ಥಿಗಳ ಮನಸ್ಸಿನಲ್ಲಿ ದೃಢವಾಗಿ ಉಳಿಯಿತು.

ಮಹಿಳೆಯರ ಚಟುವಟಿಕೆಗಳು, ಸಾಮರ್ಥ್ಯಗಳ ಬಗ್ಗೆ ತಿಳಿದರೆ, ಬಹಳಕಾಲದಿಂದಲೂ ಮಹಿಳೆಯರು ಮಾಡುತ್ತಾ ಬಂದ ಬೇರೆ ಬೇರೆ ಕೆಲಸಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ:

- ಮನೆಗೆಲಸಗಳನ್ನು ಮಾಡುವುದು, ಮನೆಯನ್ನು ನೋಡಿಕೊಳ್ಳುವುದು, ಅಡಿಗೆಮಾಡುವುದು, ಮನೆಯ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದು.
- ಜಾನುವಾರುಗಳನ್ನು ಸಾಕಿ ಬೆಳೆಸುವುದು, ಆ ಮೂಲಕ ಕುಟುಂಬದ ವರಮಾನವನ್ನು ಹೆಚ್ಚಿಸುವುದು.
- ಚಾಪೆ ನೇಯುವುದು, ಬುಟ್ಟಿ ಹೆಣೆಯುವುದು, ಬಟ್ಟೆ ಹೊಲಿಯುವುದು.
- ಕಸಗುಡಿಸುವುದು, ಮನೆಯನ್ನು ಸ್ವಚ್ಛಗೊಳಿಸುವುದು, ರೋಗ ನಿರೋಧಕ ಕಾರ್ಯ, ನಾಟಿವೈದ್ಯ.
- ಮಕ್ಕಳಿಗೆ ಜನ್ಮನೀಡುವುದು, ಅವರಪಾಲನೆ ಪೋಷಣೆ.
- ಮನೆಯ ಕೈತೋಟದಲ್ಲಿ ತರಕಾರಿ, ಹಣ್ಣು ಹಂಪಲು, ಹೂವು, ಗೆಡ್ಡೆಗೆಣಸು ಬೆಳೆಸಿ ಮಾರಾಟಮಾಡುವುದು, ಹಾಲಿನ ಉತ್ಪನ್ನ ಮತ್ತು ಮಾರಾಟ ಮಾಡುವುದು.
- ವಸ್ತುಗಳನ್ನು ಹಿತಮಿತವಾಗಿ ಉಪಯೋಗಿಸುವುದು, ಸಂಬಂಧಿಕರು, ನೆರೆಹೊರೆಯರೊಡನೆ, ಸ್ನೇಹಿತರೊಡನೆ ಉತ್ತಮ ಬಾಂಧವ್ಯವನ್ನು ಬೆಳೆಸುವುದು.
- ಹೊಲಗದ್ದೆಗಳ ಕೆಲಸ, ಧಾನ್ಯವನ್ನು ಸಂಗ್ರಹಿಸುವುದು, ಬಿತ್ತನೆ ಬೀಜಗಳ ಸಂರಕ್ಷಣೆ.

ಮೇಲೆ ತಿಳಿಸಿದ ಬುದ್ಧಿವಂತಿಕೆಯ ಜವಾಬ್ದಾರಿಯುತವಾದ, ಸೂಕ್ಷ್ಮವಾದ, ನಿಪುಣವಾದ ಮತ್ತು ಹೆಚ್ಚು ಸಮಯ ತೆಗೆದುಕೊಳ್ಳುವ ಇಂತಹ ಹಲವು ಕೆಲಸಗಳನ್ನು ಮಹಿಳೆಯರು ಮಾಡುತ್ತ ಬರುತ್ತಿದ್ದಾರೆ.

ಶಿಕ್ಷಣದ ಅಭಿವೃದ್ಧಿಯ ಫಲವಾಗಿ ಶಿಕ್ಷಕ ವೃತ್ತಿ, ದಾದಿಗಳ ಕೆಲಸ, ಟೈಪಿಸ್ಟ್, ಶೀಘ್ರಲಿಪಿಗಾರ್ತಿ, ಪೊಲೀಸ್, ಮೊದಲಾದ ಬೇರೆ ಬೇರೆ ಕೆಲಸಗಳಲ್ಲಿ ನಿರತರಾಗಿ ತಮ್ಮ ಕೆಲಸಗಳನ್ನು ಶ್ರದ್ಧೆಯಿಂದ ನಿರ್ವಹಿಸುವರು. ಉತ್ತಮವಾಗಿ ವೈದ್ಯರು, ಇಂಜನಿಯರ್, ಉಪನ್ಯಾಸಕರು, ವಕೀಲರು, ನ್ಯಾಯಾಧೀಶರು, ಪತ್ರಿಕೋದ್ಯಮಿಗಳು ಎಂಬ ಕೆಲಸದಲ್ಲಿ ನಿರತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿವಿಧ ಕಲಾಕ್ಷೇತ್ರ, ಚಲನಚಿತ್ರ ಮುಂತಾದವುಗಳಲ್ಲಿ ಪ್ರಸಿದ್ಧ ಕಲೆಗಾರರು ಇದ್ದಾರೆ.ಆಟೋ, ಕಾರು, ಬಸ್ಸು – ಲಾರಿ – ಟ್ರಾಕ್ಟರ್ ಚಾಲಕಿಯರಾಗಿಯೂ, ವಿಮಾನದ ಗಗನ ಸಖಿಯರಾಗಿ, ಚಾಲಕಿಯರಾಗಿಯೂ ಗಗನಗಾಮಿಗಳಾಗಿ, ಸಂಶೋಧಕರಾಗಿ, ವಿಜ್ಞಾನಿಗಳಾಗಿಯೂ ಪುರುಷರಿಗೆ ಸಮನಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ. ಸರ್ಕಾರಿ ಅಧಿಕಾರಿ, ಬ್ಯಾಂಕುಗಳ ವ್ಯವಸ್ಥಾಪಕರಾಗಿ, ಜಿಲ್ಲಾಧಿಕಾರಿಯಾಗಿ, ಪೊಲೀಸ್ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಹೆಸರುವಾಸಿಯಾಗಿದ್ದಾರೆ.



ಈ ರೀತಿ ಹಲವಾರು ಕ್ಷೇತ್ರಗಳಲ್ಲಿ ಮಹಿಳೆಯರು ಅತ್ಯುತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವುದನ್ನು ಕಂಡನಂತರವೂ ಪುರಷರು ಮಾತ್ರವೇ ಮಾಡುವಂತಹ ಕೆಲಸ ಇದು ಎಂದು ಯಾರಿಂದಲಾದರೂ ಹೇಳಲು ಸಾಧ್ಯವಿದೆಯೆ? ಮಹಾಕವಿ ಭಾರತಿಯಾರ್ ಕಂಡ ದೃಷ್ಟಿಯಲ್ಲಿ ಆಧುನಿಕ ಕಾಲದ ಮಹಿಳೆಯರು ಇದ್ದಾರೆ.

"ಮಾದರ್ ತಮ್ಮೆ ಇಳಿವು ಸೈಯು
ಮಡಮೆಯ್ಯೆ ಕೊಳುತ್ತು ವೋಂ
ವೈಯ್ಯ ವಾಳ್ವು ತನ್ನಿಲೆಂದ
ವಗೈಯಿಲುಂ ನಮಕ್ಕುಳ್ಳೇ;
ತಾದರೆನ್ರ ನಿಲೈಮ್ಮೈಮಾರಿ
ಆಣ್‌ಗಳೋಡು ಪೆಣ್‌ಗಳುಂ
ಸರಿ ನಿಗರ್ ಸಮಾನ ಮಾಗ
ವಾಳ್ವೋಂ ಇಂದ ನಾಟ್ಟಿಲೇ !"

ಎಂದು ಹಾಡಿದ ರಾಷ್ಟ್ರಕವಿ ಭಾರತಿ ಯಾರ್ ಪದ್ಯದ ಸಾಲುಗಳಲ್ಲಿ ಯಾವ ಕ್ಷೇತ್ರದಲ್ಲೂ ಮಹಿಳೆಯರು ಪುರುಷರಿಗಿಂತ ಕಡಿಮೆಯಿಲ್ಲ ಎಂಬ ಸತ್ಯವನ್ನು ತಿಳಿಸುತ್ತದಲ್ಲವೇ?

## ಸ್ತ್ರೀಕುಲ ತಿಲಕ
## ಡಾಕ್ಟರ್ ಮುತ್ತು ಲಕ್ಷ್ಮಿ

ಮಹಿಳೆಯರ ಬುದ್ಧಿವಂತಿಕೆಗೆ ನಿದರ್ಶನವಾಗಿ ಪ್ರಖ್ಯಾತರಾದವರು ಸ್ತ್ರೀ ಕುಲ ತಿಲಕ – ಡಾಕ್ಟರ್ ಮುತ್ತು ಲಕ್ಷ್ಮಿ 1886 ನೇ ವರ್ಷ ಜುಲೈ ತಿಂಗಳು 30ನೇ ತಾರೀಖಿನಂದು ಪುದುಕೋಟೆಯ ಸಂಸ್ಥಾನದಲ್ಲಿ ಜನಿಸಿದರು. ಅವರು ಶಿಕ್ಷಣ ಪಡೆಯುವಾಗಲೇ ಶ್ರೇಷ್ಠತನದಲ್ಲಿ ಪ್ರಜ್ವಲಿಸಿದರು. " ಬೆಳೆಯುವ ಪೈರು ಮೊಳಕೆಯಲ್ಲಿಯೇ" ಎಂಬ ಗಾದೆಯ ಮಾತಿನಂತೆ ಬುದ್ಧಿವಂತಿಕೆ, ಶೋಧನಾಶಕ್ತಿ, ಹೃದಯವಂತಿಕೆ, ಉದಾರತೆ, ನ್ಯಾಯ ಶೀಲತೆ ಮುಂತಾದ ಮಾನವೀಯ ಮೌಲ್ಯಗಳು, ಸತ್ಯ ತಿಳಿಯುವ ಆಸಕ್ತಿಯನ್ನು ಚಿಕ್ಕಂದಿನಿಂದಲೇ ಹೊಂದಿದವರಾಗಿದ್ದರು.

ಸಮುದಾಯದ ಸಂಪ್ರದಾಯದಂತೆ ಶಾಲೆಗೆ ಹೋಗಿ ಶಿಕ್ಷಣ ಪಡೆಯುವ ಅವಕಾಶವಿಲ್ಲದ ಕಾರಣ ಮನೆಯಲ್ಲಿ ಪ್ರತ್ಯೇಕವಾದ ಶಿಕ್ಷಕರ ಮೂಲಕ ವಿದ್ಯೆಯನ್ನು ಕಲಿತು ಶಾಲೆಯ ಅಂತಿಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಪುರುಷರು ಮಾತ್ರ ಕಲಿಯುವ ಪುದುಕೋಟೆ ಕಾಲೇಜಿನಲ್ಲಿ ಮೊತ್ತ ಮೊದಲಿಗೆ ಪ್ರವೇಶವನ್ನು ಪಡೆದು ಕಲಿತ ವಿದ್ಯಾರ್ಥಿನಿ ಯೊಬ್ಬರೇ ಅವರಾಗಿದ್ದರು. ನೀತಿ – ನ್ಯಾಯ, ಕುತೂಹಲ, ಕರುಣೆ, ಮಾನವೀಯ ಮೌಲ್ಯತೆಗಳನ್ನು ಒಳಗೊಂಡು ಸಮಾಜದ ಒಬ್ಬ ಶ್ರೇಷ್ಠ ಮಹಿಳೆ ಯೆನಿಸಿಕೊಂಡರು.





ಡಾಕ್ಟರ್ ಮುತ್ತು ಲಕ್ಷ್ಮಿ

ಚೆನ್ನೈ ವೈದ್ಯಕೀಯ ಮಹಾವಿದ್ಯಾಲಯದಲ್ಲಿ 1912ರಲ್ಲಿ ವೈದ್ಯರಾಗಿ ಪದವಿಯನ್ನು ಪಡೆದ ಭಾರತದ ಮೊತ್ತಮೊದಲ ಸ್ತ್ರೀ ಮುತ್ತು ಲಕ್ಷ್ಮಿಯವರು. ಆಗಿನ ಕಾಲದ ಬ್ರಿಟೀಷ್ ಸರ್ಕಾರದಿಂದ ಆಯ್ಕೆಯಾಗುವ ಭಾರತೀಯ ಸದಸ್ಯರನ್ನು ಒಳಗೊಂಡ, ಚೆನ್ನೈ ಪ್ರಾಂತ್ಯದ ವಿಧಾನ ಸಭೆಯ ಮೊದಲ ಮಹಿಳಾ ಸದಸ್ಯೆ ಎನಿಸಿಕೊಂಡರು. ಬಳಿಕ ಅಲ್ಲಿ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ಪುರಷರಂತೆ ಸ್ತ್ರೀಯರಿಗೂ ಮತದಾನದ ಹಕ್ಕು ಮತ್ತು ಆಸ್ತಿಯ ಹಕ್ಕುಗಳನ್ನೂನೀಡಬೇಕೆಂದು ಕೇಳಿಕೊಂಡರು.

ಅಖಿಲ ಭಾರತ ಮಹಿಳಾ ಸಂಘದ ಮೊದಲ ಅಧ್ಯಕ್ಷರಾಗಿ ಮತ್ತು ಚೆನ್ನೈ ಮಹಾನಗರಸಭೆಯ ಮೊದಲ ಅಧಿಕಾರಿಯಾಗಿ ಆಯ್ಕೆಯಾದರು. ಇವರ ಸೇವೆಯನ್ನು ಎಲ್ಲರೂ ಹೊಗಳಿದರು. ಸ್ವಾತಂತ್ರ್ಯ ಹೋರಾಟದ ಮುಖಂಡರ ಮನೋಭಾವನೆಯನ್ನು ಗೌರವಿಸಿದ ಮುತ್ತು ಲಕ್ಷ್ಮಿ ಅಮ್ಮ ನವರು ಕವಿ ಭಾರತಿಯಾರ್ ರವರನ್ನೂ ತಿಳಿದವರಾಗಿದ್ದರು.

ತಲ ತಲಾಂತರದಿಂದ ಹಲವು ಹಿಂಸೆಗಳಿಗೆ ಒಳಗಾದ ಮಹಿಳೆಯರ ಸ್ಥಿತಿಯನ್ನು ಕಂಡು ಮರುಗಿದರು. ಮಹಿಳೆಯರ ಕಷ್ಟಗಳನ್ನು ನಿವಾರಿಸುವ ನಿರ್ಧಾರವನ್ನು ಕೈಗೊಂಡರು. ಸ್ತ್ರೀ ಶಿಕ್ಷಣದ ಹಕ್ಕು, ಪುರುಷರಿಗೆ ಸಮಾನವಾಗಿ ಸಮಾಜದಲ್ಲಿ ಬಾಳುವ ಹಕ್ಕು, ಸ್ತ್ರೀಯರಿಗೆ ಸ್ವತಂತ್ರವಾದ ಜೀವನದ ಹಕ್ಕು, ಹೆಣ್ಣು ಮಗುವನ್ನು ಶಿಶುಹತ್ಯೆಯಿಂದ ಕಾಪಾಡುವುದು, ಮಹಿಳೆಯರ ಅಭಿವೃದ್ಧಿಗೆ ಸಹಾಯ ಮಾಡುವುದು ಮುಂತಾದ ಉದ್ದೇಶಗಳನ್ನು ನೆರವೇರಿಸಲು ಶ್ರಮಿಸಿದರು.

ಭಯಾನಕವಾದ ಅರ್ಬುದ (ಕ್ಯಾನ್ಸರ್) ರೋಗದಿಂದ ನರಳುತ್ತಿರುವ ಮಹಿಳೆಯರ ಕಷ್ಟವನ್ನು ಹೋಗಲಾಡಿಸಲು, ಲಂಡನ್ನಿನ ರಾಯಲ್ ಅರ್ಬುದ ರೋಗ ಆಸ್ಪತ್ರೆಯಲ್ಲಿ ತರಬೇತಿಯನ್ನು ಪಡೆದು ತಾಯ್ನಾಡಿಗೆ ಹಿಂದಿರುಗಿದ ಮುತ್ತು ಲಕ್ಷ್ಮಿಯವರು ಚೆನ್ನೈ ಅಡೆಯಾರಿನಲ್ಲಿ ಒಂದು ಅರ್ಬುದ ರೋಗದ ಆಸ್ಪತ್ರೆಯನ್ನು ಆರಂಭಿಸಿ ಆ ಮೂಲಕ ಮಹಿಳಾಸಮೂಹಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದರು. ಇಂದಿಗೂ ಆ ಆಸ್ಪತ್ರೆಯು ಸೇವೆ ಸಲ್ಲಿಸು ವುದರಮೂಲಕ ಮುತ್ತು ಲಕ್ಷ್ಮಿಯರ ಹೆಸರು ಮತ್ತು ಹೊಗಳಿಕೆಯ ಸ್ಮರಣಾರ್ಥಕವಾಗಿದೆ.

ವಿಧವೆಯರು, ಗಂಡನಿಂದ ತ್ಯಜಿಸಲ್ಪಟ್ಟವರು ಮೊದಲಾದವರ ಕ್ಷೇಮಾಭಿವೃದ್ಧಿಗಾಗಿ ತಾಂಬರಂ ಎಂಬ ಸ್ಥಳದಲ್ಲಿ ಸರ್ಕಾರದ ಸಹಾಯದಿಂದ ಮಹಿಳೆಯರ ಪುನರ್ ವಸತಿ ಗೃಹವೊಂದನ್ನು ಆರಂಭಿಸಲು ದಾರಿಮಾಡಿದರು.

ದೇಶದಲ್ಲಿ ಬಾಲ್ಯದಲ್ಲಿಯೇ ಹೆಣ್ಣುಮಕ್ಕಳಿಗೆ ಮದುವೆ ಮಾಡುವ ಕೆಡಕು ಎಲ್ಲೆಡೆಯಲ್ಲಿಯೂ ಇದ್ದಿತು. ಅದನ್ನು ತಡೆಗಟ್ಟುವ ಮಾರ್ಗವನ್ನು ಸರ್ಕಾರದ ಗಮನಕ್ಕೆ ತಂದರು. ಕಾನೂನು ಜಾರಿಗೊಳಿಸುವುದರ ಮೂಲಕ ಬಾಲ್ಯವಿವಾಹ ಪದ್ಧತಿಯನ್ನು ತಡೆಗಟ್ಟಿದರು.

ಆಗಿನ ಕಾಲದಲ್ಲಿ ವಯಸ್ಸಿಗೆ ಬಂದ ಯುವತಿಯರನ್ನು ದೇವದಾಸಿಗಳನ್ನಾಗಿಸಿ ದೇವಾಲಯ ಗಳಿಗೆ ಕಳುಹಿಸುವ ಪದ್ಧತಿ ತಲತಲಾಂತರದಿಂದ ನಡೆದುಬಂದ ಕಾರಣ ದೇಶಾದಾದ್ಯಂತ ಸಾವಿರಾರು ಮಹಿಳೆಯರು " ದೇವದಾಸಿ" ಎಂಬ ಹೆಸರಿನಿಂದ ದುಃಖಮಯವಾದ ಜೀವನವನ್ನು ನಡೆಸುತ್ತಿದ್ದರು. ದೇವದಾಸಿ ಎಂದರೆ ದೇವರದಾಸಿ ಎಂಬ ನಂಬಿಕೆಯು ಇತ್ತು. ಇದರಿಂದ ಬಹಳ ವಿನಾಶಕ್ಕೆ ಮಹಿಳೆಯರು ಒಳಗಾಗುವುದನ್ನು ತಡೆಯಲು ಮತ್ತು ಅವರ ಕ್ಷೇಮಾಭಿವೃದ್ಧಿಗಾಗಿ ದೇವದಾಸಿ ಎಂಬ ಪದ್ಧತಿಯನ್ನು ಕಾನೂನಿನ ಪ್ರಕಾರ ನಿರ್ಮೂಲ ಮಾಡಲು ಕಾನೂನನ್ನು ಜಾರಿಗೆ ತರಲು ಸರ್ಕಾರವನ್ನು ಒತ್ತಾಯಿಸಿದರು. ಇದನ್ನು ಸಂಪ್ರದಾಯವಾದಿಗಳು ಮತ್ತು ಹಿರಿಯರು ವಿರೋಧಿಸಿದರು. ಈ ಸಂದರ್ಭದಲ್ಲಿ ಮುತ್ತು ಲಕ್ಷ್ಮಿಯವರಿಗೆ ಆತ್ಮಗೌರವ ಚಳುವಳಿಯ ಮುಖಂಡರಾದ E.V. ರಾಮಸ್ವಾಮಿಯವರು ಇವರಿಗೆ ತಮ್ಮಬೆಂಬಲವನ್ನು ನೀಡಿದರು. ಶಾಸಕಾಂಗದಲ್ಲಿ ಇದಕ್ಕೆ ಬೆಂಬಲವಾಗಿ ವಾದಮಾಡಿ "ದೇವದಾಸಿ ಪದ್ಧತಿಯ ನಿರ್ಮೂಲನಾ ಕಾನೂನು" ಜಾರಿಗೆ ಬರುವಂತೆ ಮಾಡಿದರು.

ಪೆರಿಯಾರ್ ಅವರೊಂದಿಗೆ ತಮಿಳ್ ತಂಗಾಳಿ ಶ್ರೀಯುತ. ವಿ. ಕಲ್ಯಾಣ ಸುಂದರಂ, ಮೂವಲೂರ್ ರಾಮಾಮೃತ ಅಮ್ಮನವರು ಒಂದಾಗಿ ಈ ಕಾನೂನಿನ ಅವಶ್ಯಕತೆಯನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿ ಅವರ ಬೆಂಬಲವನ್ನು ಪಡೆದರು.

ಮುತ್ತುಲಕ್ಷ್ಮಿಯವರು ಜೀವನದಾದ್ಯಂತ ಹಲವಾರು ಸಾಮಾಜಿಕ ಸೇವಾಕಾರ್ಯಗಳನ್ನು ನೆರವೇರಿಸಿದರು. ನಿರ್ಗತಿಕರಿಗೆ ವಸತಿಸೌಕರ್ಯಗಳನ್ನು ಮಾಡಿದರು. ಕೊಳಚೆ ಪ್ರದೇಶದಲ್ಲಿ ವಾಸಿಸುವ ಜನರ ದುರಾವಸ್ಥೆಯನ್ನು ಕಂಡು ಮರುಗಿದರು. ಅವರಿಗಾಗಿ ವೈದ್ಯಕೀಯ ವ್ಯವಸ್ಥೆಹಾಗೂ ಆರೋಗ್ಯಕರ ಜೀವನವನ್ನು ನಡೆಸಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡಿದರು. ಇವರ ಈ ಮಹತ್ತರ ಸೇವೆಗೆ ಹಲವಾರು ಸಂಘ ಸಂಸ್ಥೆಗಳು ಧನ ಸಹಾಯಮಾಡುವ ಮೂಲಕ ಸಹಕಾರ ನೀಡಿದರು. ಅಬಲೆ ಮಹಿಳೆಯರಿಗೆ ರಕ್ಷಣೆಯನ್ನು ನೀಡಲು 1930ರಲ್ಲಿ ಅಡ್ಯೈಯಾರಿನಲ್ಲಿ "ಅವ್ವೈ ಇಲ್ಲಂ" ಅನ್ನು ಆರಂಭಿಸಿದರು.

ಮಹಿಳೆಯರಿಗೆ 8ನೇ ತರಗತಿಯವರೆಗೆ ಉಚಿತ ಶಿಕ್ಷಣ ದೊರೆಯುವಂತೆ ವ್ಯವಸ್ಥೆಮಾಡಿದರು. ಸಮುದಾಯ ಸೇವೆಯೇ ತನ್ನ ಉಸಿರು ಎಂದು ಬಾಳಿದ ಸ್ತ್ರೀ ಕುಲತಿಲಕ ಡಾ. ॥ ಮುತ್ತುಲಕ್ಷ್ಮಿ ರೆಡ್ಡಿಯವರಿಗೆ ಕೇಂದ್ರ ಸರ್ಕಾರವು 1950ರಲ್ಲಿ "ಪದ್ಮಭೂಷಣ" ಎಂಬ ಬಿರುದನ್ನು ಕೊಟ್ಟು ಗೌರವಿಸಿತು.

ಮುತ್ತುಲಕ್ಷ್ಮಿ ಯವರ ಹೆಸರು ಮತ್ತು ಹೊಗಳಿಕೆಯು ಶಾಶ್ವತವಾಗಿರುವಂತೆ ಮಾಡಲು ಅವರ ಹೆಸರಿನಲ್ಲಿ ತಾಯಿ ಮಗುವಿನ ಕ್ಷೇಮವನ್ನು ಕಾಪಾಡಲು, ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಆಹಾರವನ್ನು ಒದಗಿಸಲು ಅನುಕೂಲವಾಗುವಂತೆ ಹೆರಿಗೆಗೆ ಮೂರು ತಿಂಗಳು ಮೊದಲು ಮತ್ತು ಹೆರಿಗೆಯ ನಂತರ ಮೂರು ತಿಂಗಳು ಗಳಿಗೂ ಸಹಾಯಧನವನ್ನು ನೀಡುವ ಯೋಜನೆಯನ್ನು ತಮಿಳುನಾಡು ಸರ್ಕಾರವು ಕಾರ್ಯಗೊಳಿಸುತ್ತಾ ಬರುತ್ತಿದೆ.

# ಮೌಲ್ಯಮಾಪನ

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

(1). ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆಲ್ಲರೂ

ಅ. ಸಮ ಬಂಡವಾಳದಾರರು. ಆ. ಸಮ ಆಸ್ತಿವಂತರು

ಇ. ಸಮ ಹಕ್ಕನ್ನು ಹೊಂದಿದವರು.

(2). ಭಾರತದ ಮೊತ್ತಮೊದಲಿನ ಮಹಿಳಾ ವೈದ್ಯೆ

ಅ. ಮುತ್ತು ಲಕ್ಷ್ಮಿ ಅಮ್ಮ. ಆ. ವಿಜಯ ಲಕ್ಷ್ಮಿ ಪಂಡಿತ್

ಇ. ಕಲ್ಪನಾ ಚಾವ್ಲಾ.

(3). ಮಹಿಳೆಯರಿಂದ ಮಾಡಲು ಸಾಧ್ಯವಿಲ್ಲದ ಕೆಲಸ

ಅ. ಕ್ರಿಕೆಟ್ ಆಟ ಆಡುವುದು. ಆ. ವಿಮಾನವನ್ನು ಓಡಿಸುವುದು.

ಇ. ಯಾವುದೂ ಇಲ್ಲ.

(4). " ಅವ್ವೈ ಇಲ್ಲಂ " ಎಂಬುದು

ಅ. ಕೈಬಿಡಲಾದ ವಿಧವೆಯರ ಸಂರಕ್ಷಣೆ ನಿಲಯ

ಆ. ಅನಾಥ ಬಾಲಕಿಯರ ಆಶ್ರಮ ಇ. ನಿರುದ್ಯೋಗಿ ಯುವತಿಯ ರಕ್ಷಣ ನಿಲಯ.

**II. ಬಿಟ್ಟ ಸ್ಥಳವನ್ನು ತುಂಬಿರಿ.**

1. ಸಮತ್ವ ಸಮುದಾಯವನ್ನು ನಿರ್ಮಿಸುವುದೇ __________ ಆಗುತ್ತದೆ.
2. ಪುರುಷ ಮತ್ತು ಸ್ತ್ರೀಯರ ಮತದಾನದ ಹಕ್ಕಿನ ವಯಸ್ಸು __________ .
3. ಮಾ ದರ್ ತಮ್ಮೈ ಇಳಿವು ಸೆಯ್ಯುಂ ಮಡಮೈಯೈಕೊಳುತ್ತು ವೋಂ ಎಂದು ಹಾಡಿದವರು __________.

**III. ಹೊಂದಿಸಿರಿ.**

| | |
|---|---|
| 1. ಸಮಾಜದ ಏರಳಿತವನ್ನು ಹೋಗಲಾಡಿಸುವುದೇ | – ಕಾಲಕಾಲಾಂತರದಿಂದ ಬಂದ ಅಭಿಪ್ರಾಯ. |
| 2. ಪುರುಷರು ಮಾತ್ರ ಎಲ್ಲಾ ಉದ್ಯೋಗಗಳಿಗೆ ಅರ್ಹರು | – ಮುತ್ತುಲಕ್ಷ್ಮಿಯವರ ಹೊಗಳಿಕೆಯನ್ನು ಪಸರಿಸಿತು. |
| 3. ಮಹಿಳೆಯರು ಪುರುಷರ ಆಶ್ರಯದಲ್ಲೇ ಜೀವಿಸುವವರು | – ತಪ್ಪಾದ ಅಭಿಪ್ರಾಯ. |
| 4. ಬಾಲ್ಯ ವಿವಾಹವನ್ನು ತಡೆಗಟ್ಟಲು | – ಸಾಮಾಜಿಕ ನ್ಯಾಯ. |
| 5. ಅಡೆಯಾರಿನ ಅರ್ಬುದ ಆಸ್ಪತ್ರೆ | – ನಿಷೇಧಾತ್ಮಕ ಕಾನೂನನ್ನು ಜಾರಿಗೆ ತಂದರು. |

**IV. ವಿವರವಾಗಿ ಉತ್ತರಿಸಿ.**

1. ಮಾನವ ಸಂಪತ್ತಿನ ಅಭಿವೃದ್ಧಿಗೆ ತಡೆಯಾಗಿ ಇರುವುದು ಯಾವುದು?
2. ಮಹಿಳೆಯರು ದೈಹಿಕವಾಗಿ ಮತ್ತು ಬೌದ್ಧಿಕವಾಗಿ ಮಾಡುವಂತಹ ಯಾವುದಾದರೂ ಎಂಟು ಕೆಲಸಗಳನ್ನು ಹೆಸರಿಸಿ.
3. ತಾಯಿ – ಮಗು ಕ್ಷೇಮವನ್ನು ಬಯಸುವ ತಮಿಳುನಾಡಿನ ಸರ್ಕಾರದ ಒಳ್ಳೆಯ ಯೋಜನೆಯು ಯಾವುದು?
4. ಡಾಕ್ಟರ್ ಮುತ್ತು ಲಕ್ಷ್ಮಿಯವರು ಭಾರತದಲ್ಲಿ ಮೊಟ್ಟಮೊದಲಿಗೆ ಮಾಡಿದ ಸಾಧನೆಗಳನ್ನು ಬರೆಯಿರಿ.
5. ಡಾಕ್ಟರ್ ಮುತ್ತುಲಕ್ಷ್ಮಿಯವರಿಗೆ ಕೇಂದ್ರ ಸರ್ಕಾರದಿಂದ ಯಾವ ಬಿರುದು ದೊರಕಿತು?
6. ಮಹಿಳೆಯರ ಸಮಾನತೆಯನ್ನು ಯಾವ ರೀತಿಯಲ್ಲಿ ನಿರಾಕರಿಸಲಾಗಿದೆ?

# ರಚನಾತ್ಮಕ ಮೌಲ್ಯಮಾಪನ

1. ಗ್ರಂಥಾಲಯಕ್ಕೆ ಹೋಗಿ ಕೆಳಕಂಡ ನಾಯಕರ ಬಗ್ಗೆ ಗ್ರಂಥಗಳನ್ನು ಓದಬೇಕು.
   ಅ. ಈ.ವೇ.ರಾ.
   ಆ. ಮೂವಲೂರು ರಾಮಾಮೃತ ಅಮ್ಮನವರು.
2. ನಿನಗೆ ತಿಳಿದಿರುವವರಲ್ಲಿ ಸಾಧನೆಗೈದ ಮಹಿಳೆಯೆಂದು ಯಾರನ್ನು ಭಾವಿಸುವೆ? ಏಕೆ? ಎಂದು ಹೇಳಬೇಕು.
3. ಭಾರತ ಸರ್ಕಾರದ ಉನ್ನತ ಬಿರುದುಗಳನ್ನು ಪಟ್ಟಿಮಾಡಿ.
4. ಮಹಿಳೆಯರು ಸಮಾನ ಹಕ್ಕನ್ನು ಹೊಂದಿದ್ದಾರೆ/ಹೊಂದಿಲ್ಲ – ವಿಚಾರಗೋಷ್ಠಿ ನಡೆಸುವುದು.
5. ಡಾಕ್ಟರ್ ಮುತ್ತು ಲಕ್ಷ್ಮಿಯವರ ಜೀವನದ ಮುಖ್ಯಾಂಶಗಳನ್ನು ಭರ್ತಿ ಮಾಡಬೇಕು.

- ಹೆಸರು :
- ಹುಟ್ಟಿದ ದಿನಾಂಕ :
- ಹುಟ್ಟಿದ ಸ್ಥಳ :
- ಶಿಕ್ಷಣ ಪಡೆದ ಕಾಲೇಜುಗಳು :
  ಅ.
  ಆ
- ಸೇವೆ ಮಾಡಿದ ಅಧಿಕಾರ :
  ಅ.
  ಆ.
- ಸ್ಥಾಪಿಸಿದ ಆಸ್ಪತ್ರೆ :
- ಪಡೆದ ಬಿರುದು/ವರ್ಷ :
- ಅವರು ಮಾಡಿದ ಸೇವೆಗಳಲ್ಲಿ ನಿನಗೆ ಅತಿ ಮೆಚ್ಚುಗೆಯಾದುದು :

ಭೂಗೋಳಶಾಸ್ತ್ರ

# ಪಾಠ 1. ನಾವು ವಾಸಿಸುವ ಭೂಮಿ

ನಿನ್ನ ಊರಿನಲ್ಲಿ ಬೆಟ್ಟ ಇರುವುದೇ? ಸಮುದ್ರ ಇರುವುದೇ? ನದಿ ಇದೆಯೇ? ನಿನ್ನ ಗ್ರಾಮ ಸಮತಟ್ಟಾಗಿ ಇರುವುದೇ ಅಥವಾ ಪರ್ವತ ಪ್ರದೇಶವೇ?

ಪರ್ವತಗಳು, ಪೀಠಭೂಮಿಗಳು, ಬಯಲು ಪ್ರದೇಶಗಳು ಮೊದಲಾದವು ಭೂಮಿಯ ಮುಖ್ಯ ಸ್ವರೂಪಗಳಾಗಿವೆ. ಎತ್ತರವಾದ ಶಿಖರಗಳಿಂದ ಕೂಡಿದ ಭೂಭಾಗವೇ ಪರ್ವತ. ಪರ್ವತಗಳು ಮುಂದುವರಿದು ರಚನೆಯಾಗುವಾಗ ಅದು ಪರ್ವತ ಶ್ರೇಣಿ ಎಂದು ಕರೆಯಲಾಗುತ್ತದೆ. ವಿಶ್ವದಲ್ಲಿ ಅತೀ ಎತ್ತರವಾದ ಪರ್ವತ ಶ್ರೇಣಿ ಹಿಮಾಲಯ ಪರ್ವತ ಶ್ರೇಣಿಯಾಗಿದೆ.

★ ಭಾರತದ ಭೂಪಟವನ್ನು ನೋಡು – ಭಾರತದಲ್ಲಿ ಇರುವ ಬೇರೆ ಒಂದು ಪರ್ವತ ಶ್ರೇಣಿಯನ್ನು ನೋಡಿ ತಿಳಿಯಿರಿ.

ಭೂಪ್ರದೇಶಗಳಿಗಿಂತ ಸ್ವಲ್ಪ ಎತ್ತರವಾಗಿಯೂ ಅದರ ಮೇಲ್ಭಾಗ ಸಮತಲವಾಗಿರುವ ಭೂಪ್ರದೇಶವನ್ನು ಪೀಠಭೂಮಿ ಎನ್ನತ್ತಾರೆ. ಟಿಬೆಟ್‌ಪೀಠಭೂಮಿಯು ಪ್ರಪಂಚದಲ್ಲಿಯೇ ಅತೀಎತ್ತರವಾದ ಪೀಠ ಭೂಮಿಯಾಗಿದೆ.

★ದಕ್ಷಿಣ ಭಾರತದಲ್ಲಿರುವ ಪೀಠಭೂಮಿ ಯಾವುದು? ಶಿಕ್ಷಕರನ್ನು ಕೇಳಿ ತಿಳಿದುಕೊಳ್ಳಿ.

ವಿಶಾಲವಾಗಿ ಹರಡಿರುವ ಸಮವಾದ ಭೂಪ್ರದೇಶವನ್ನು ಬಯಲು ಪ್ರದೇಶ ಎಂದು ಕರೆಯುವರು. ಗಂಗಾನದಿ ಹರಿಯುವ ಉತ್ತರ ಭಾರತದ ಪ್ರದೇಶ ಪ್ರಪಂಚದ ಪ್ರಮುಖ ಬಯಲು ಪ್ರದೇಶಗಳಲ್ಲಿ ಒಂದಾಗಿದೆ.

★ತಮಿಳುನಾಡಿನಲ್ಲಿ ಕಾವೇರಿ ಮತ್ತು ತಾಮ್ರಪರ್ಣಿ ಮುಂತಾದ ನದಿಗಳ ಬಯಲು ಪ್ರದೇಶಗಳನ್ನು ಭೂಪಟದಲ್ಲಿ ಗುರುತಿಸಿ.

ಚೆನ್ನೈ, ಮಧುರೈ, ತಿರುನಲ್ವೇಲಿ, ತಿರುಚಿ, ಊಟಿ, ಕೊಡೈಕೆನಾಲ್, ಥೇನಿಯಂತಹ ನಗರಗಳನ್ನು ಹೊಂದಿರುವುದು ನಮ್ಮ ತಮಿಳುನಾಡು ಭಾರತದ ಒಂದು ಭಾಗ.

★ರಾಮೇಶ್ವರ ಮತ್ತು ತಿರುಚೆಂದೂರ್ ಮೊದಲಾದ ನಗರಗಳು ಎಂತಹ ಭೂಸ್ವರೂಪವನ್ನು ಒಳಗೊಂಡಿವೆ? ಕಂಡು ಹಿಡಿ.

★ನಿನ್ನ ಗ್ರಾಮ ಎಲ್ಲಿದೆ? ಬಯಲು ಪ್ರದೇಶದಲ್ಲಿಯೇ, ಬೆಟ್ಟ ಪ್ರದೇಶಗಳಲ್ಲಿಯೇ? ಅಥವಾ ಪೀಠಭೂಮಿಯಲ್ಲಿಯೇ? ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳಿರಿ.


ಭಾರತ, ಏಷ್ಯಾ ಖಂಡದ ಒಂದು ಭಾಗ. ಭಾರತ, ಚೀನಾ, ಪಾಕಿಸ್ತಾನಗಳಂತಹ ಹಲವು ರಾಷ್ಟ್ರಗಳು ಏಷ್ಯಾ ಖಂಡದಲ್ಲಿವೆ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಗಳಂತಹ ದೇಶಗಳಿರುವ ಭೂಪ್ರದೇಶವನ್ನು ಯೂರೋಪ್ ಖಂಡ ಎಂದು ಕರೆಯಲಾಗಿದೆ.

ಏಷ್ಯಾ, ಆಫ್ರಿಕಾ, ಉತ್ತರ ಅಮೇರಿಕಾ, ದಕ್ಷಿಣ ಅಮೇರಿಕಾ, ಯೂರೋಪ್, ಆಸ್ಟ್ರೇಲಿಯಾ, ಅಂಟಾರ್ಟಿಕಾ ಎಂಬ ಒಟ್ಟು ಏಳು ಖಂಡಗಳು ಪ್ರಪಂಚದಲ್ಲಿವೆ. ಸಮುದ್ರಗಳನ್ನುಒಳಗೊಂಡಿರದ ಮುಂದುವರಿದ ಭೂಪ್ರದೇಶಗಳನ್ನು ಖಂಡಗಳು ಎಂದು ಕರೆಯುತ್ತೇವೆ.

## ಏಳು ಖಂಡಗಳು


### 1. ಏಷ್ಯಾ :

ಏಳು ಖಂಡಗಳಲ್ಲಿ ಬಹುದೊಡ್ಡದಾದುದು ಏಷ್ಯಾ ಖಂಡ. ಇದು ಭೂಮಿಯ ಉತ್ತರಾರ್ಧಗೋಳದಲ್ಲಿದೆ. ನಾವು ವಾಸಿಸುವ ಭಾರತ ಏಷ್ಯಾ ಖಂಡದಲ್ಲಿದೆ. ಗೋಬಿ ಶೀತ ಮರುಭೂಮಿ, ಅತೀ ಎತ್ತರವಾದ ಹಿಮಾಲಯ ಪರ್ವತ ಶ್ರೇಣಿಗಳು ಮುಂತಾದವು ಏಷ್ಯಾ ಖಂಡದಲ್ಲಿವೆ.


ಹಿಮಾಲಯ ಪರ್ವತ

ಕನ್ನಡ ವಿಜ್ಞಾನ

# ಪ್ರಪಂಚದ ಭೂಪಟ


ಆರ್ಟಿಕ್
ಮಹಾಸಾಗರ
ಉತ್ತರ ಅಮೆರಿಕಾ
ಯೂರೋಪ್
ಏಷ್ಯಾ
ಅಟ್ಲಾಂಟಿಕ್
ಮಹಾಸಗಾರ
ಪೆಸಿಫಿಕ್ ಮಹಾಸಾಗರ
ಫೆಸಿಫಿಕ್ ಮಹಾಸಾಗರ
ಆಫ್ರಿಕಾ
ದಕ್ಷಿಣ
ಅಮೆರಿಕಾ
ಹಿಂದೂ ಮಹಾಸಾಗರ
ಆಸ್ಟ್ರೇಲಿಯಾ
ಏಳು ಖಂಡಗಳು
ಐದು ಮಹಾಸಾಗರಗಳು
ಅಂಟಾರ್ಟಿಕ್ ಮಹಾಸಾಗರ
ಅಂಟಾರ್ಟಿಕಾ



ಆಫ್ರಿಕಾ – ಸಹರಾಮರುಭೂಮಿ

**2. ಆಫ್ರಿಕಾ :** ವಿಸ್ತೀರ್ಣದಲ್ಲಿ ಇದು ಎರಡನೆಯ ದೊಡ್ಡ ಖಂಡ. ಈ ಖಂಡವು ಉತ್ತರಾರ್ಧಗೋಳದಲ್ಲೂ, ದಕ್ಷಿಣಾರ್ಧಗೋಳದಲ್ಲೂ ವಿಸ್ತರಿಸಿದೆ. ಭೂಮಧ್ಯ ರೇಖೆಯು ಈ ಖಂಡಗಳನ್ನು ಎರಡು ಭಾಗಗಳಾಗಿ ವಿಭಜಿಸಿದೆ.

ಪ್ರಪಂಚದಲ್ಲಿ ಅತ್ಯಂತ ಉದ್ದವಾದ ನೈಲ್ ನದಿ (6695 ಕಿ.ಮೀ) ಈ ಖಂಡದಲ್ಲಿ ಹರಿಯುತ್ತದೆ. ಅತೀ ದೊಡ್ಡದಾದ ಮರುಭೂಮಿಯಾದ ಸಹರಾ ಮರುಭೂಮಿ ಈ ಖಂಡದಲ್ಲಿದೆ. ದಟ್ಟವಾದ ಕಾಡುಗಳು ಮತ್ತು ಖನಿಜ ಸಂಪತ್ತುಗಳನ್ನು ಹೊಂದಿದ ಖಂಡ.

**3. ಉತ್ತರ ಅಮೇರಿಕಾ :** ಅಟ್ಲಾಂಟಿಕ್, ಪೆಸಿಫಿಕ್ ಮತ್ತು ಆರ್ಟಿಕ್ ಮಹಾಸಾಗರಗಳಿಂದ ಸುತ್ತುವರಿಯಲ್ಪಟ್ಟ ಖಂಡವಿದು. ಇದರ ಮತ್ತೊಂದು ಭಾಗದಲ್ಲಿರುವ ರಾಖಿ ಪರ್ವತ ಶ್ರೇಣಿ ಅತ್ಯಂತ ಉದ್ದವಾದ ಪರ್ವತ ಶ್ರೇಣಿ.

4. ದಕ್ಷಿಣ ಅಮೇರಿಕಾ : ಈ ಖಂಡವು ಬಹುತೇಕವಾಗಿ ಉತ್ತರಾರ್ಧಗೋಳದಲ್ಲಿದೆ.

ಪ್ರಪಂಚದಲ್ಲಿ ಉದ್ದವಾದ ಆಂಡೀಸ್ ಪರ್ವತ ಶ್ರೇಣಿ ಈ ಖಂಡದಲ್ಲಿದೆ. ಪ್ರಪಂಚದ ಅತೀ ವಿಶಾಲವಾದ ಅಮೇಜಾನ್ ನದಿ (6586 ಕಿ.ಮೀ ಉದ್ದ) ಈ ಖಂಡದಲ್ಲಿದೆ.

5. ಯೂರೋಪ್ : ಏಷ್ಯಾದ ಪಶ್ಚಿಮದಲ್ಲಿರುವ ಖಂಡ. ಇದು ಆಲ್ಫ್ಸ್ ಪರ್ವತ ಶ್ರೇಣಿ ಯೂರೋಪಿನಲ್ಲಿದೆ.

6. ಆಸ್ಟ್ರೇಲಿಯಾ :ನಾಲ್ಕು ಕಡೆಗಳಲ್ಲೂ ಸಮುದ್ರಗಳಿಂದ ಆವರಿಸಲ್ಪಟ್ಟ ಆಸ್ಟ್ರೇಲಿಯಾ ಒಂದು ದ್ವೀಪ ಖಂಡ (Island Continent). ಈ ಖಂಡವು ನ್ಯೂಜಿಲ್ಯಾಂಡ್, ಫಿಜಿಗಳಂತಹ ಹಲವು ದ್ವೀಪಗಳನ್ನು ಒಳಗೊಂಡಿದೆ. ಫಿಜಿ ದ್ವೀಪಗಳು, ಪಾಪುವಾ, ನ್ಯೂಗಿನಿಯಾ ಮೊದಲಾದ ದ್ವೀಪಗಳು ಸಾಮಾನ್ಯವಾಗಿ ಸಾಗರ ದ್ವೀಪಗಳು ಎಂದು ಕರೆಯಲ್ಪಡುತ್ತವೆ. ಗ್ರೇಟ್ ಬ್ಯಾರಿಯರ್‌ರೀಪ್ ಎಂಬ ಪ್ರಪಂಚದ ಅತೀ ದೊಡ್ಡ ಹವಳದ ಬಂಡೆ ಆಸ್ಟ್ರೇಲಿಯಾದ ಸಮುದ್ರ ತೀರದಲ್ಲಿದೆ.

7. ಅಂಟಾರ್ಟಿಕಾ : ದಕ್ಷಿಣ ಧ್ರುವ ಪ್ರದೇಶದಲ್ಲಿರುವ ಈ ಖಂಡ ಪೂರ್ತಿಯಾಗಿ ಹಿಮಚ್ಛಾದಿತವಾಗಿದೆ. ಇದು ಅತ್ಯಂತ ಶೀತ ಪ್ರದೇಶ.ಪೆಂಗ್ವಿನ್ ಪಕ್ಷಿ, ಸೀಲ್ ಮೊದಲಾದ ಜೀವ ಜಂತುಗಳು ವಾಸಿಸುವ ಸ್ಥಳ.

ಇಲ್ಲಿ ಸಂಶೋಧನೆ ನಡೆಸುವುದಕ್ಕಾಗಿ " ದಕ್ಷಿಣ ಗಂಗೋತ್ರಿ " ಮತ್ತು ' ಮೈತ್ರೇಯಿ ' ಎಂಬ ಸಂಶೋಧನಾಲಯಗಳನ್ನು ನಮ್ಮ ದೇಶ ನಿರ್ಮಿಸಿದೆ. ವರ್ಷಪೂರ್ತಿಭಾರತೀಯ ವಿಜ್ಞಾನಿಗಳು ಹಲವರು ಅಲ್ಲಿಗೆ ಹೋಗಿ ಸಂಶೋಧನೆಯನ್ನು ನಡೆಸುವರು.



ಅಂಟಾರ್ಟಿಕಾ, ಮೈತ್ರೇಯಿ ವಸತಿಗೃಹಗಳು.

ದ್ವೀಪ :

ನಾಲ್ಕು ಕಡೆಗಳಲ್ಲಿ ನೀರಿನಿಂದ ಆವರಿಸಲ್ಪಟ್ಟಿರುವ ಭೂಪ್ರದೇಶವನ್ನು ದ್ವೀಪ ಎಂದು ಕರೆಯುತ್ತೇವೆ. ಶ್ರೀಲಂಕಾ ಒಂದು ದ್ವೀಪ. ಹಲವು ದ್ವೀಪಗಳ ಸಮೂಹಗಳನ್ನು ದ್ವೀಪ ಸಮೂಹ ಎನ್ನುತ್ತೇವೆ.

★ ಭಾರತಕ್ಕೆ ಸೇರಿದ ಒಂದು ದ್ವೀಪ ಸಮೂಹದ ದೃಶ್ಯ. ★